**ದಿನಾಂಕಃ 19.02.2025 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ–ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎನ್.ಟಿ. ವಕೀಲರಿಂದಃ–**

ವಾದಿಯರ ತಂದೆ ಕಂಬಣ್ಣನವರಿಗೆ ಸರ್ವೆ ನಂಬರ್ಃ135 ರಲ್ಲಿ 8 ಎಕರೆ ಜಮೀನು ಇತ್ತು. ಪಾಲುವಿಭಾಗದಲ್ಲಿ ಮೂಡಲಗಿರಿಯಪ್ಪನವರಿಗೆ 3 ಎಕರೆ 10 ಗುಂಟೆ ಜಮೀನು ಬಂದಿರುತ್ತದೆ. ಸದರಿ 3 ಎಕರೆ 10 ಗುಂಟೆ ಜಮೀನಿನ ಉತ್ತರಕ್ಕೆ– ಪ್ರಕಾಶಣ್ಣನವರ ಜಮೀನು, ಪಶ್ಚಿಮಕ್ಕೆ– ಸರ್ವೆ ನಂಬರ್ಃ136, ಪೂರ್ವಕ್ಕೆ– ತಿಮ್ಮಜ್ಜನ ಜಮೀನು ಮತ್ತು ದಕ್ಷಿಣಕ್ಕೆ– ಗೋವಿಂದಪ್ಪನವರ ಜಮೀನು ಇರುತ್ತದೆ. ಸದರಿ 3 ಎಕರೆ 10 ಗುಂಟೆ ಜಮೀನಿನ ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ಸರ್ವೆ ನಂಬರ್ಃ135 ರಲ್ಲಿ 2 ನೇ ವಾದಿಗೆ 2 ಎಕರೆ 18 ಗುಂಟೆ ಜಮೀನು ಬಂದಿರುತ್ತದೆ. 3 ನೇ ವಾದಿಗೆ ಸರ್ವೆ ನಂಬರ್ಃ135 ರಲ್ಲಿ 2 ಎಕರೆ 18 ಗುಂಟೆ ಜಮೀನು ಬಂದಿರುತ್ತದೆ.

ಸರ್ವೆ ನಂಬರ್ಃ136 ರ ಜಮೀನು 4 ನೇ ಪ್ರತಿವಾದಿ ಶಶಿಯವರಿಗೆ ಸೇರಿರುತ್ತದೆ. 4 ನೇ ಪ್ರತಿವಾದಿಯ ಜಮೀನಿಗೆ ಹೋಗಲು 1 ನೇ ವಾದಿಯ ಜಮೀನಿನ ದಕ್ಷಿಣ ದಿಕ್ಕಿಗೆ ಇರುವ ರಸ್ತೆಯ ಮೂಲಕವೇ ಹೋಗಬೇಕು ಎಂದರೆ ಸರಿ. ಸರ್ವೆ ನಂಬರ್ಃ 215/ಪಿ1 ಜಮೀನು ಯಾರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. 1 ರಿಂದ 3 ನೇ ಪ್ರತಿವಾದಿಗಳಿಗೆ ಹರಿಯಬ್ಬೆ ಗ್ರಾಮದಲ್ಲಿ ಜಮೀನುಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಹರಿಯಬ್ಬೆ ಗ್ರಾಮದಲ್ಲಿ ನನಗೆ ಸೇರಿದ ಯಾವುದೇ ಜಮೀನು ಇಲ್ಲ ಎಂದರೆ ಸಾಕ್ಷಿಯು ಏನನ್ನೂ ಉತ್ತರಿಸುವುದಿಲ್ಲ. ನಮ್ಮ ತಂದೆ ದಾಸಣ್ಣನವರದ್ದು ಬಜ್ಜಹಳ್ಳಿ ಗ್ರಾಮ ಎಂದರೆ ಸರಿ. ಹರಿಯಬ್ಬೆ ಮತ್ತು ಹರಿಯಬ್ಬೆ ಪಾಳ್ಯ ಬೇರೆ ಬೇರೆ ಊರುಗಳು ಎಂದರೆ ಸರಿ. ನಾನು ಹರಿಯಬ್ಬೆ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಾನು ಅಲ್ಲಿಯೇ ಹುಟ್ಟಿ ಬೆಳೆದಿರುತ್ತೇನೆ.

ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವ ಎ ಬಿ ಸಿ ಡಿ ಬಂಡೀ ರಸ್ತೆ ಎಲ್ಲಿಂದ ಎಲ್ಲಿಗೆ ಹೋಗುತ್ತದೆ ಎಂದರೆ ಸಾಕ್ಷಿಯು ಅಂತಹ ರಸ್ತೆಯೇ ಇರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಮುಖ್ಯ

ವಿಚಾರಣೆ ಪ್ರಮಾಣ ಪತ್ರದಲ್ಲಿ ಎ ಬಿ ಸಿ ಡಿ ರಸ್ತೆ ಇದೆ ಎಂದು ನಾನು ಹೇಳಿ ಬರೆಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಅಂಶಗಳು ನನಗೆ ತಿಳಿದಿರುವುದಿಲ್ಲ ಎಂದರೆ ಸಾಕ್ಷಿಯು ಇಂಗ್ಲೀಷ್‌ನಲ್ಲಿರುವ ಕಾರಣ ನನಗೆ ತಿಳಿದಿರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ.

ವಾದ ಪತ್ರದ ಜೊತೆಗೆ ಸಲ್ಲಿಸಿದ ಕಚ್ಚಾ ನಕಾಶೆಯನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ಅದರಲ್ಲಿರುವ ವಿಷಯಗಳು ನನಗೆ ತಿಳಿದಿರುವುದಿಲ್ಲ. 1 ನೇ ವಾದಿಯ ಜಮೀನಿನ ದಕ್ಷಿಣ ದಿಕ್ಕಿಗೆ ರಸ್ತೆ ಇದ್ದು ಪ್ರತಿವಾದಿಗಳು ಅದೇ ರಸ್ತೆಯ ಮೂಲಕ ತಮ್ಮ ಜಮೀನುಗಳಿಗೆ ಹೋಗುತ್ತಾರೆ ಎಂದರೆ ಸರಿಯಲ್ಲ. ಕೆಂಚಯ್ಯನಹಟ್ಟಿ ಗ್ರಾಮದ ಬಗ್ಗೆ ನನಗೆ ತಿಳಿದಿರುತ್ತದೆ. ಅಲ್ಲಿ ತುಂಬಾ ಜನರು ಗ್ರಾಮಸ್ಥರು ವಾಸವಾಗಿರುತ್ತಾರೆ ಎಂದರೆ ಸರಿ. ಸದರಿ ಗ್ರಾಮದ ಮಕ್ಕಳು ಶಾಲೆಗೆ ಹೋಗಲು ಈ ಮೇಲೆ ಹೇಳಿದ ರಸ್ತೆಯನ್ನೇ ಬಳಸುತ್ತಾರೆ ಎಂದರೆ ಸರಿಯಲ್ಲ. ವೀರನಾಗಮ್ಮನ ದೇವಸ್ಥಾನಕ್ಕೆ ಹೋಗಲೂ ಸಹ ಅದೇ ರಸ್ತೆಯಲ್ಲಿ ಹೋಗಬೇಕು ಎಂದರೆ ಸರಿಯಲ್ಲ. ನಾನು ಈಗ 3 ನೇ ವಾದಿಯ ಮನೆಯಲ್ಲಿಯೇ ವಾಸವಾಗಿರುತ್ತೇನೆ ಎಂದರೆ ಸಾಕ್ಷಿಯು ಏನನ್ನೂ ಉತ್ತರಿಸುವುದಿಲ್ಲ. ನಾನು ವಾದಿಯರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.